ಬೆಂಗಳೂರಿನ ಹೊರವಲಯದಲ್ಲಿ ಹೊಸದಾಗಿ ತಲೆಯೆತ್ತುತ್ತಿರುವ ಆ ಬಡಾವಣೆಯಲ್ಲಿ ಸದಾನಂದನಿಗೆ ನಿವೇಶನ ಖರೀದಿಸಿದ್ದಾಯಿತು. ಆದಷ್ಟು ಬೇಗ ಮನೆ ಕಟ್ಟಿಸಬೇಕು ಎಂಬುದು ಅವನ ಅಭಿಪ್ರಾಯ. ಆದರೆ ನಗರದಿಂದ ಹೊರಗೆ ಜನಸಂಚಾರವಿಲ್ಲದ ಪ್ರದೇಶ; ಮಣ್ಣಿನ ರಸ್ತೆಗಳಾಗಿವೆ ಎಂಬುದನ್ನು ಬಿಟ್ಟರೆ ಹೆಚ್ಚೇನೂ ಬೆಳವಣಿಗೆ ಆಗದ ಜಾಗ. ಇಂಥ ಕಡೆ ಮನೆ ಮಾಡಿಕೊಂಡರೆ ಕಳ್ಳಕಾಕರ ಹಾವಳಿ ಸದಾ ಇರಬಹುದು ಎಂದು ಗಾಯತ್ರಿಗೆ ಭಯ. ಹಾಗಾಗಿ ಈಗಲೇ ಮನೆ ಕಟ್ಟಿಸುವುದು ಬೇಡ ಎಂದು ಅವಳು ಹೇಳುತ್ತಾ ಇದ್ದಾಳೆ.

'ಸೈಟು ಕೈಗೆ ಬಂದಿರುವಾಗ, ಸಾಲ ಕೊಡಲು ಬ್ಯಾಂಕು ಇರುವಾಗ ಮನೆ ಕಟ್ಟಿಸಿಕೊಂಡು ಬಿಡಬೇಕು. ಇನ್ನು ನಾಲ್ಕೈದು ವರ್ಷದಲ್ಲಿ ಈ ಬಡಾವಣೆ ಎಷ್ಟು ಅಭಿವೃದ್ಧಿ ಹೊಂದುತ್ತದೆ ನೀನೇ ನೋಡುವಿಯಂತೆ. ನಮಗೆ ಸ್ವಲ್ಪ ಮುಂದಾಲೋಚನೆ ಇರಬೇಕು. ಬಾಡಿಗೆ ಮನೆಯಲ್ಲಿ ಎಷ್ಟು ದಿವಸ ತಳ್ಳೋದು ನಾವು?' ಸದಾನಂದನ ಕಣ್ಣುಗಳಲ್ಲಿ ದೃಢ ನಿರ್ಧಾರ ಹೊಮ್ಮುತ್ತಿತ್ತು. ಕೊನೆಗೂ ಅವನ ಹಟವೇ ಗೆದ್ದಿತು.

ಸದಾನಂದ ಬ್ಯಾಂಕ್ ಉದ್ಯೋಗಿಯಾಗಿ ಸುಮಾರು ಮೂವತ್ತು ವರ್ಷ ಸೇವೆ ಸಲ್ಲಿಸಿದವನು, ಈಗ ನಿವೃತ್ತಿಯ ಅಂಚಿನಲ್ಲಿದ್ದಾನೆ. ಮಡದಿ ಗಾಯತ್ರಿ ಒಂದು ಖಾಸಗಿ ಶಾಲೆಯಲ್ಲಿ ಅಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದಾಳೆ. ಅವರಿಬ್ಬರ ಮಗ ಗಿರೀಶ ಇಂಜಿನಿಯರಿಂಗ್ ಓದು ಮುಗಿಸಿ ಬಹುರಾಷ್ಟ್ರೀಯ ಸಂಸ್ಥೆಯೊಂದರಲ್ಲಿ ಉದ್ಯೋಗಕ್ಕೆ ಸೇರಿಕೊಂಡಿದ್ದಾನೆ. ಇಷ್ಟು ವರ್ಷ ಬಾಡಿಗೆ ಮನೆಯಲ್ಲಿಯೇ ಇದ್ದು ಕಷ್ಟಪಟ್ಟವರಿಗೆ ಈಗ ಸ್ವಂತ ಮನೆ ಮಾಡುವುದೆಂದರೆ ಸಂಭ್ರಮದ ವಿಷಯ. ತಮ್ಮದೇ ಮನೆ ಅಂತ ಆಗುವಾಗ ಅದು ಯಾವ ರೀತಿ ಇರಬೇಕು ಎಂದು ಎಲ್ಲರಿಗೂ ಅವರವರದೇ ಕಲ್ಪನೆಗಳು ಇರುವುದು ಸಹಜ. ಹಾಗಾಗಿ ಎಲ್ಲರೂ ಮುತುವರ್ಜಿ ವಹಿಸಿ, ಆರ್ಕಿಟೆಕ್ಟಿನ ಸಹಾಯವನ್ನೂ ಪಡೆದು, ಮೂರು ಶಯನ ಕೋಣೆಗಳಿರುವ ಸುಂದರವಾದ ಹಾಗೂ ಅನುಕೂಲವಾದ ಮನೆಯನ್ನು ಕಟ್ಟಿಸಿದರು. ಅಕ್ಕಪಕ್ಕ ಮನೆಗಳೇ ಇಲ್ಲದ ಕಾರಣ ಭದ್ರತೆಯ ಸಲುವಾಗಿ ಮನೆಯ ಸುತ್ತಲೂ ಐದಡಿ ಎತ್ತರದ ಕಲ್ಲಿನ ಗೋಡೆ ಏರಿಸಲಾಯಿತು. ಉಕ್ಕಿನ ಗೇಟು ಮತ್ತು ಮನೆಯ ಹಿಂದೆ ಮುಂದೆ ಸಾಗುವಾನಿ ಮರದ ಗಟ್ಟಿ ಬಾಗಿಲುಗಳು, ಇಷ್ಟಲ್ಲದೆ ಕಬ್ಬಿಣದ ಶಟರುಗಳನ್ನೂ ಹಾಕಿ ಬಂದೋಬಸ್ತು ಮಾಡಲಾಯಿತು.

ಗೃಹನಿರ್ಮಾಣ ಈಗಲೇ ಬೇಡವೆಂದು ಹೇಳಿದ ಗಾಯತ್ರಿಗೂ ಇಲ್ಲಿ ಸ್ವಂತ ಮನೆಯಲ್ಲಿ ವಾಸ್ತವ್ಯ ಹೂಡುವಾಗ ಭಾರೀ ಖುಶಿ. ಮನೆಗೆ ಹೊಂದುವಂತಹ ಪೀಠೋಪಕರಣಗಳನ್ನೆಲ್ಲ ಆರಿಸಿ ತಂದು ಅಲಂಕರಿಸಿದರು ದಂಪತಿ. ಮನೆಯ ಮುಂದೆ ಕೆಲವು ಹೂವಿನ ಗಿಡಗಳನ್ನು ನೆಟ್ಟು ಸಂತೋಷಪಟ್ಟಳು ಗಾಯತ್ರಿ. ಹಿಂಭಾಗದಲ್ಲಿ ತೊಂಡೆ, ಬೆಂಡೆ, ಬದನೆ, ಬಸಳೆ ಮೊದಲಾದ ತರಕಾರಿಗಳನ್ನು ಬೆಳೆಸಲು ಸಣ್ಣ ಕೈತೋಟದ ಏರ್ಪಾಡಾಯಿತು.

ಈ ಮನೆಗೆ ಕಾಲಿರಿಸಿದ ಗಳಿಗೆ ಭಾರೀ ಶುಭವಾದುದು ಅನ್ನೋ ಹಾಗೆ ಮಗನಿಗೆ ಒಂದು ಒಳ್ಳೆಯ ಸಂಬಂಧ ಕುದುರಿ, ಮದುವೆಯೂ ಅದ್ದೂರಿಯಿಂದ ನೆರವೇರಿತು. ಸೊಸೆ ಅನ್ವಿತಾ ಸೌಮ್ಯ ಸ್ವಭಾವದ, ಸುಂದರ ಹುಡುಗಿ. ಮಗನ ಹಾಗೆ ಅವಳು ಕೂಡಾ ಸಾಫ್ಟ್‌ವೇರ್ ಇಂಜಿನಿಯರ್. ಸೊಸೆ ಬಂದ ನಂತರ ಅವಳ ಪೈಕಿಯವರು ಬಂದು ಹೋಗಿ ಮಾಡುತ್ತಾ ಇರುವುದರಿಂದ, ಯಾವಾಗಲೂ ಮನೆ ತುಂಬಾ ಜನ. ಹಾಗಾಗಿ ಗಾಯತ್ರಿಗೆ ಸಂಭ್ರಮ. ಮನೆ ನಗರದಿಂದ ದೂರ ಇರುವುದು ಒಂದು ಲೋಪವೆಂದು ಗಾಯತ್ರಿಗೆ ಈಗ ಅನಿಸುವುದೇ ಇಲ್ಲ, ತನ್ನ ಶಾಲೆಗೆ ದೂರ ಆಗುವುದಾದರೂ ಕೂಡಾ. ಸೊಸೆಯೇನೋ ಒಳ್ಳೆ ಗುಣದವಳೇ, ಆದರೆ ಅವಳಿಗೆ ಮನೆ ಕೆಲಸ ಏನೂ ಬರುತ್ತಿಲ್ಲ ಎಂಬುದು ಗಾಯತ್ರಿಗೆ ಸ್ವಲ್ಪ ಬೇಸರದ ವಿಷಯವೇ ಆಗಿತ್ತು. ಆದರೆ ಓದುವುದು ಮುಗಿದ ಕೂಡಲೇ ಕೆಲಸಕ್ಕೆ ಸೇರಿದ ಹುಡುಗಿ, ಆದ್ದರಿಂದ ಅಡಿಗೆ ಕೆಲಸ ಕಲಿಯಲು ಅವಕಾಶ ಸಿಕ್ಕಿರಲಾರದು; ನಿಧಾನಕ್ಕೆ ಕಲಿಯುತ್ತಾಳೆ, ಈಗ ನನಗೆ ಅಲ್ಪಸ್ವಲ್ಪ ಸಹಾಯ ಮಾಡಿದರೂ ಸಾಕು ಎಂದು ಗಾಯತ್ರಿ ಸಮಾಧಾನ ಪಟ್ಟುಕೊಂಡಳು.

ಆದರೆ ನಿಜವಾಗಿ ಶಾಕ್ ಆಗಿದ್ದುದು ಗಿರೀಶ ಅನ್ವಿತಾ ಇಬ್ಬರೂ ಒಂದು ದಿನ ಬಂದು 'ನಾವು ಕೆನಡಾಕ್ಕೆ ಹೋಗ್ತಾ ಇದೀವಿ' ಅಂದಾಗ. ಅಲ್ಲಿನ ಪ್ರಸಿದ್ಧ ಕಂಪೆನಿಯೊಂದರಲ್ಲಿ ಇಬ್ಬರಿಗೂ ಕೆಲಸ ದೊರಕಿದ್ದು, ಅಲ್ಲಿ ಹೋದ ಕೂಡಲೇ ವಾಸಕ್ಕೆ ಮನೆ ಕೊಡ್ತಾರೆ, ಓಡಾಟಕ್ಕೆ ಕಾರು ಒದಗಿಸ್ತಾರೆ ಎಂದೆಲ್ಲ ಹೇಳಿ ಸಂಭ್ರಮ ಪಡುವಾಗ, ಗಾಯತ್ರಿ ಮತ್ತು ಸದಾನಂದ ಕುಸಿದು ಹೋದರು. ಅದು ಹೇಗೆ ಇಬ್ಬರಿಗೂ ಒಂದೇ ಕಡೆ ಉದ್ಯೋಗ ದೊರಕಿದುದು ವಿಚಾರಿಸಿದರೆ ಸರಿಯಾದ ಉತ್ತರ ಇಲ್ಲ. ಮದುವೆ ಆದ ಕೂಡಲೇ ವಿದೇಶದಲ್ಲಿ ಉದ್ಯೋಗಕ್ಕೆ ಅರ್ಜಿ ಗುಜರಾಯಿಸಲು ಆರಂಭಿಸಿದ್ದರು, ನಮಗೆ ಗೊತ್ತುಪಡಿಸಿದುದು ಇಷ್ಟು ತಡವಾಗಿ, ಅದೂ ಕೆಲಸ ಸಿಕ್ಕಿದ ಮೇಲೆ ಎಂದು ಗೊತ್ತಾಗುವಾಗ ಗಾಯತ್ರಿಗೆ ಆದ ತಳಮಳ ಅಪಾರ. ಮಗನ ಬಳಿ ತನ್ನ ಅಸಮಾಧಾನ ತೋರಿಸಿಕೊಂಡಳು ಕೂಡ. ಆದರೆ ಮಗ, ಅವನದೇ ಆದ ಕಾರಣ ಮುಂದೆ ಮಾಡಿ ಅಮ್ಮನನ್ನು ಸಾಂತ್ವನ ಹೇಳಿದ , 'ಕೆನಡಾಕ್ಕೆ ಹೋಗಿ ಕೆಲಸ ಮಾಡಿ ಒಂದಷ್ಟು ಸಂಪಾದಿಸಿಕೊಂಡು ಬಂದರೆ ನಿಂಗೆ ಸಂತೋಷ ಅಲ್ವಾ ಅಮ್ಮ? ಕಡಿಮೆ ಸಂಬಳ ಬರುವ ನಿನ್ನ ಶಾಲೆ ಕೆಲಸವನ್ನು ಬಿಟ್ಟು ಮನೆಯಲ್ಲಿ ಆರಾಮವಾಗಿರು ಅಮ್ಮ' ಅವನ ಸಲಹೆ ಕೇಳಿ ಗಾಯತ್ರಿ ಸಿಡಿಮಿಡಿಗೊಂಡಳು.

'ಮಗ ಸೊಸೆ ಅವರ ಉದ್ಯೋಗದಲ್ಲಿ ಮೇಲೆ ಬರೋದಿದ್ದರೆ ನೀನ್ಯಾಕೆ ಅಡ್ಡಿ ಮಾಡ್ತಿ? ಅವರಿಗೆ ಬೇಕಾದ ಹಾಗೆ ಮಾಡಲಿ' ಎಂದು ಸದಾನಂದ ಮಗನ ಪರ ನಿಂತಾಗ ಗಾಯತ್ರಿಗೆ ಆಶ್ಚರ್ಯ ಕೋಪ ಎರಡೂ ಒಟ್ಟಿಗೇ ಉಕ್ಕಿ ಬಂದುವು. ಬಾಯಲ್ಲಿ ಮಾತು ಹೊರಡದಿದ್ದರೂ ಮನಸ್ಸಲ್ಲಿ ಅವಳು ಮಥಿಸತೊಡಗಿದಳು. 'ಮಗ ಸೊಸೆ ಇಲ್ಲಿಯೇ ಇರಬೇಕೆಂಬುದೇ ಇವರ ಆಕಾಂಕ್ಷೆ. ಆದರೆ ವಿದೇಶಕ್ಕೆ ಹೊರಟು ನಿಂತವರನ್ನು ತಡೆಯಲು ಇಷ್ಟವಿಲ್ಲ. ಮನದೊಳಗೆ ಎಷ್ಟೇ ಬೇಸರವಿದ್ದರೂ ತೋರಿಸಿಕೊಳ್ಳದೆ ಹೇಗಿರ್ತಾರೆ ಇವರು? ನಾನಾದರೆ ಎಲ್ಲವನ್ನೂ ಬಡಬಡನೆ ಒದರಿ ಬಿಡುವವಳು. ಹಾಗಾಗಿ ಎಲ್ಲರೆದುರು ನಾನೇ ಕೆಟ್ಟವಳು. ನಾನಿನ್ನು ಮಾತಾಡಲ್ಲ ಈ ವಿಷಯದಲ್ಲಿ.'

ಮಗ ಸೊಸೆ ಕೆನಡಕ್ಕೆ ಹಾರಿ ಹೋದ ಮೇಲೆ ಗಾಯತ್ರಿ ಸದಾನಂದ ಇಬ್ಬರಿಗೂ ಮನೆ ಖಾಲಿ ಖಾಲಿ ಅನಿಸಲು ಶುರುವಾಯಿತು. ಇಷ್ಟು ದೊಡ್ಡ ಮನೆ ಜನವೇ ಇಲ್ಲದೆ ಭಣಗುಟ್ಟತೊಡಗಿತು. ಲೋಕಾಭಿರಾಮ ಮಾತಾಡೋಣ ಎಂದರೆ ಸುತ್ತಮುತ್ತ ಒಂದು ನರಪಿಳ್ಳೆಯೂ ಇಲ್ಲ. ಏತನ್ಮಧ್ಯೆ ಕೆನಡಕ್ಕೆ ಹೋದವರು ಆಗಾಗ ಫೋನ್ ಮಾಡಿ ವಿಚಾರಿಸಿಕೊಳ್ಳುತ್ತಿದ್ದರು. ಅಲ್ಲಿ ಅವರ ಬಂಗಲೆ, ಕಚೇರಿ, ಕಾರು, ಸುತ್ತಲಿನ ಪ್ರಕೃತಿ ಸೌಂದರ್ಯ ಇವೆಲ್ಲದರ ವಿವರಣೆ ಕೊಟ್ಟು ತಂದೆ ತಾಯಿಯ ಮನತಣಿಸಲು ಯತ್ನಿಸುತ್ತಿದ್ದರು. ಅವರ ಪುಲಕದ ಮಾತುಗಳನ್ನು ಕೇಳಿ ಇಬ್ಬರೂ ಸಂತೋಷಪಟ್ಟುಕೊಂಡರು. ಪುನಃ ಅವರ ಕರೆಗಾಗಿ ಕತ್ತು ಚಾಚುವುದೇ ಇವರ ಕೆಲಸ! ಅಡಿಗೆ ತಿಂಡಿ ಏನು ಮಾಡಿಕೊಳ್ಳಲಿಕ್ಕೂ ಉತ್ಸಾಹವಿಲ್ಲ. ತಿನ್ನಲು ಇಬ್ಬರೇ ಇರೋದು ತಾನೇ!

ಮನೆಯ ಆವರಣದೊಳಗಡೆ ಒಂದು ಮೂಲೆಯಲ್ಲಿ ಬಟ್ಟೆ ಒಗೆಯಲು ಬಂಡೆ, ಅದರ ಬಳಿ ಒಂದು ನಲ್ಲಿ, ಗಿಡಗಳಿಗೆ ನೀರು ಚಿಮ್ಮಿಸುವ ಸಲುವಾಗಿ ಒಂದು ಉದ್ದದ ಪೈಪು ಇಷ್ಟನ್ನು ಅಳವಡಿಸಿಕೊಂಡಾಗಿತ್ತು. ಶಾಲೆಗೆ ಹೋಗುವಾಗ ಗೇಟಿಗೆ ಬೀಗ ಹಾಕಿ ಹೋಗುವ ಕಾರಣ ಏನೂ ಭಯ ಇರಲಿಲ್ಲ. ಆದರೂ, ಒಂದು ದಿನ ಗಾಯತ್ರಿ ಶಾಲೆಯಿಂದ ಬರುವಾಗ ಆ ಪೈಪು, ನಲ್ಲಿ ಎಲ್ಲ ಕಾಣೆಯಾಗಿತ್ತು. ಗೇಟು ಬೀಗ ಹಾಕಿದುದು ಹಾಗೆಯೇ ಇತ್ತು. ಬೀಗ ತೆಗೆಯದೇ ಒಳಬಂದು ಇವನ್ನು ಕದ್ದುಕೊಂಡು ಹೋದವರು ಯಾರು ಎಂದು ಬಹಳ ಚಿಂತೆಯಾಯಿತು ಗಾಯತ್ರಿಗೆ. ಬ್ಯಾಂಕಿನಿಂದ ಬಂದ ಸದಾನಂದ ಎಲ್ಲವನ್ನೂ ಪರಿಶೀಲಿಸಿ ಹೇಳಿದ 'ನಮ್ಮ ಮನೆಯಲ್ಲಿ ಹಗಲು ಹೊತ್ತಿನಲ್ಲಿ ಯಾರೂ ಇರಲ್ಲ ಎಂದು ಗೊತ್ತಿರುವವರೇ ಮಾಡಿದ ಕೆಲಸ ಇದು, ಅಲ್ಪ ತೃಪ್ತರು! ನಮ್ಮ ಈ ಬಡಾವಣೆ ಆರಂಭವಾಗುವಲ್ಲಿ ಒಂದು ಕೊಳೆಗೇರಿ ಬಂದಿದೆಯಲ್ಲ ಈಗ, ಅಲ್ಲಿನವರೇ ಯಾರೋ ಮಾಡಿದ್ದೋ ಏನೋ. ಇಷ್ಟೆತ್ತರದ ಗೋಡೆ ಹಾರಿ ಒಳಗೆ ಬಂದಿದ್ದಾರಲ್ಲ. ನಾಳೆನೇ ನಾನು ಮೇಸ್ತ್ರಿಯನ್ನು ಬರಮಾಡಿ ಕಳ್ಳರು ಒಳನುಸುಳದ ಹಾಗೆ ಏನಾದರೂ ವ್ಯವಸ್ಥೆ ಮಾಡಿಸಲಿಕ್ಕಾಗುತ್ತಾ ಅಂತ ನೋಡ್ತೀನಿ...'

ಮತ್ತೊಂದು ವಾರದಲ್ಲಿ ಗೋಡೆಯ ಮೇಲೆ ಗಾಜಿನ ಚೂಪು ತುಂಡುಗಳನ್ನೂ, ಕಬ್ಬಿಣದ ಕಣೆಗಳನ್ನೂ ಕೂರಿಸಿ ಅಭೇದ್ಯವಾಗಿಸಿದ್ದಾಯಿತು. ಈಗ ಮನೆ ಸುರಕ್ಷಿತ ಎಂಬ ಭಾವನೆ ಅವರಿಗೆ ನೆಮ್ಮದಿ ಉಂಟು ಮಾಡಿತು. ಆದರೆ ಈ ವಿಷಯ ತಿಳಿಸಿದಾಗ